# ಕನ್ನಡ ಪೋಸ್ಟ್

ಸಂಪಾದಕ : ಮಂಜು ಬನವಾಸೆ

KANNADA POST

ಇದು ಸುದ್ದಿ ವಿಳಾಸ

ಕನ್ನಡ ದಿನಪತ್ರಿಕೆ

ಹಾಸನ | E-mail : kannadapostnews@gmail.com | f / ಕನ್ನಡ post | Price: ₹1

Vol.No.02 | Issue. 180 | Pages. 2 | Date: 26-06-2026, FRIDAY | RNI NO: KARKAN/2024/89601 | Kannada Daily

ಸಂಪುಟ : 02 - ಸಂಚಿಕೆ : 180 - ಪುಟಗಳು : 2 26-06-2026 ಶುಕ್ರವಾರ | Ph: 8762954248 | ದರ : ₹1


## ಪಾರದರ್ಶಕ ಮತದಾರರ ಪಟ್ಟಿ ತಯಾರಿಸಲು ಸೂಚನೆ

### ಹೊಳೆನರಸೀಪುರದಲ್ಲಿ ತರಬೇತಿ ಕಾರ್ಯಕ್ರಮ | ಅ. 7ರಂದು ಅಂತಿಮ ಪಟ್ಟಿ ಪ್ರಕಟ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಕೇಂದ್ರ ಚುನಾವಣಾ ಆಯೋಗದ ನಿರ್ದೇಶನದಂತೆ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ ಕಾರ್ಯ ನಡೆಯುತ್ತಿದ್ದು, ಪಾರದರ್ಶಕವಾಗಿ ಪಟ್ಟಿ ತಯಾರಿಸುವಂತೆ ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಅಧಿಕಾರಿಗಳಿಗೆ ಸೂಚಿಸಿದರು.



ಹೊಳೆನರಸೀಪುರ ಶಿಕ್ಷಕರ ಭವನದಲ್ಲಿ ಗುರುವಾರ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ ಪ್ರಕ್ರಿಯೆ ಕುರಿತು ಆಯೋಜಿಸಿದ್ದ ತರಬೇತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, 2026ರ ಆ.5ರಂದು ಕರಡು ಮತದಾರರ ಪಟ್ಟಿ ಪ್ರಕಟ ಮಾಡಲಾಗುವುದು. ಯಾವುದೇ ದೋಷ ಕಂಡು ಬಂದರೆ ಮತದಾರರು ದಾಖಲಾತಿಗಳೊಂದಿಗೆ ಹಕ್ಕು, ಆಕ್ಷೇಪಣೆಯನ್ನು ಸಹಾಯಕ ಚುನಾವಣಾ ನೋಂದಣಿ ಅಧಿಕಾರಿಗಳಿಗೆ ಸಲ್ಲಿಸುವ ಮೂಲಕ ಪರಿಹಾರ ಕಂಡುಕೊಳ್ಳಬಹುದು ಎಂದು ತಿಳಿಸಿದರು.

ಮತಗಟ್ಟೆ ಅಧಿಕಾರಿಗಳು ಜೂ.30 ರಿಂದ ಜು.29ರ ವರೆಗೆ ಮನೆ ಮನೆಗೆ ಭೇಟಿ ನೀಡಿ ಪೂರ್ವದಲ್ಲಿ ಮುದ್ರಣಗೊಂಡಿರುವ ನಮೂನೆಯನ್ನು ದ್ವಿ ಪ್ರತಿಯಲ್ಲಿ ನೀಡುತ್ತಾರೆ. ಮತದಾರರು ಅದನ್ನು ಭರ್ತಿ ಮಾಡಿ ಪ್ರಸ್ತುತ ಭಾವಚಿತ್ರ ಅಂಟಿಸಿ ಕಡ್ಡಾಯವಾಗಿ ಸಹಿ ಮಾಡಿ ಒಂದು ಪ್ರತಿಯನ್ನು ಮತಗಟ್ಟೆ ಅಧಿಕಾರಿಗೆ ಹಿಂದಿರುಗಿಸಬೇಕು ಎಂದರು.

ಕರಡು ಮತದಾರರ ಪಟ್ಟಿಯನ್ನು 2026ರ ಆ. 5 ರಂದು ಪ್ರಕಟಿಸಲಾಗುತ್ತದೆ. ಹಕ್ಕು ಮತ್ತು ಆಕ್ಷೇಪಣೆ ಸಲ್ಲಿಸಲು ಸೆ. 4ರ ವರೆಗೆ, ಹಕ್ಕು ಮತ್ತು ಆಕ್ಷೇಪಣೆಗಳ ತಿರುವಳಿ ಅ. 3ರ ವರೆಗೆ, ಅಂತಿಮ ಮತದಾರರ ಪಟ್ಟಿಯನ್ನು ಅ. 7ರಂದು ಪ್ರಕಟಣೆ ಮಾಡಲಾಗುತ್ತದೆ ಎಂದು ತಿಳಿಸಿದರು.

ವರ್ಷದಲ್ಲಿ ನಾಲ್ಕು ಬಾರಿ ಜನವರಿ, ಏಪ್ರಿಲ್, ಜುಲೈ ಮತ್ತು ಅಕ್ಟೋಬರ್ 1 ರಂದು ಮತದಾರರ ಪಟ್ಟಿ ಪರಿಷ್ಕರಣೆ ಆಗುತ್ತದೆ.

ಆ ಸಂದರ್ಭದಲ್ಲಿ 18 ವರ್ಷ ಪೂರೈಸಿದವರು ಹೊಸ ಅರ್ಜಿ ಸಲ್ಲಿಸಬಹುದಾಗಿದೆ. ಪ್ರಸ್ತುತ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಯಾಗಿ ಹೊಸ ಮತದಾರರ ಪಟ್ಟಿ ತಯಾರಿಸಲಾಗುತ್ತದೆ ಎಂದು ತಿಳಿಸಿದರು.

ಮತದಾರರ ಪಟ್ಟಿ ಪರಿಷ್ಕರಣೆ ವೇಳೆ ಅರ್ಹ ಮತದಾರರ ಹೆಸರು ಸೇರ್ಪಡೆ, ಮೃತರಾದವರ ಅಥವಾ ಸ್ಥಳಾಂತರಗೊಂಡವರ ಹೆಸರುಗಳ ತೆಗೆದು ಹಾಕುವಿಕೆ ಹಾಗೂ ತಿದ್ದುಪಡಿಗಳನ್ನು ನಿಖರವಾಗಿ ಕೈಗೊಳ್ಳಬೇಕು. ಯಾವುದೇ ಅರ್ಹ ಮತದಾರ ಮತದಾನದ ಹಕ್ಕಿನಿಂದ ವಂಚಿತರಾಗದಂತೆ ಕ್ರಮವಹಿಸುವುದು ಅಧಿಕಾರಿಗಳ ಪ್ರಮುಖ ಜವಾಬ್ದಾರಿಯಾಗಿದೆ ಎಂದು ಹೇಳಿದರು.

ಪ್ರತಿ ಸೂಪರ್ ವೈಸರ್ ಅಡಿಯಲ್ಲಿ 8 ರಿಂದ 10 ಬಿ.ಎಲ್.ಒ.ಗಳು ಕಾರ್ಯನಿರ್ವಹಿಸುತ್ತಿದ್ದು, ತಮ್ಮ ವ್ಯಾಪ್ತಿಯ ಎಲ್ಲಾ ಬಿಎಲ್ಒಗಳ ಸಂಪೂರ್ಣ ವಿವರಗಳನ್ನು ಹೊಂದಿರಬೇಕು.

ಜೊತೆಗೆ ಅವರ ಕಾರ್ಯಚಟುವಟಿಕೆಗಳ ಮೇಲೆ ನಿರಂತರ ನಿಗಾವಹಿಸಿ ಮಾರ್ಗದರ್ಶನ ನೀಡಬೇಕು ಎಂದು ತಿಳಿಸಿದರು.

ಸಂಸದ ಶ್ರೇಯಸ್ ಪಟೇಲ್ ಹಾಗೂ ರಾಜಕೀಯ ಪಕ್ಷಗಳ ಪ್ರತಿನಿಧಿಗಳು, ಮತಗಟ್ಟೆ ಅಧಿಕಾರಿಗಳು, ಮೇಲ್ವಿಚಾರಕರು, ಏಜೆಂಟರು, ಮಾಸ್ಟರ್ ಟ್ರೈನರ್‌ಗಳು ಹಾಜರಿದ್ದರು.

## ನಿಗದಿಪಡಿಸಿದ ಸ್ಥಳದಲ್ಲಿ ವ್ಯಾಪಾರಕ್ಕೆ ಅವಕಾಶ ಕಲ್ಪಿಸಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ಪಟ್ಟಣದಲ್ಲಿ ಕಳೆದ ವರ್ಷಗಳಿಂದ ಆಹಾರ ಮತ್ತು ತಿಂಡಿ ವ್ಯಾಪಾರ ಮಾಡಿಕೊಂಡು ಜೀವನ ನಿರ್ವಹಿಸುತ್ತಿರುವ ಬೀದಿಬದಿ ವ್ಯಾಪಾರಿಗಳು, ತಮಗೆ ನಿಗದಿಪಡಿಸಿದ ಸ್ಥಳದಲ್ಲಿ ಯಾವುದೇ ತೊಂದರೆ ಇಲ್ಲದೆ ವ್ಯಾಪಾರ ನಡೆಸಲು ಅವಕಾಶ ಕಲ್ಪಿಸಬೇಕೆಂದು ಪುರಸಭಾ ಮುಖ್ಯ ಅಧಿಕಾರಿ ಮಹೇಶ್ವರಪ್ಪನವರಿಗೆ ಮನವಿ ಸಲ್ಲಿಸಿದ್ದಾರೆ.

ಈ ಹಿಂದೆ ತಮ್ಮ ಸಮಸ್ಯೆ ಕುರಿತು ವಿವಿಧ ಹಂತಗಳಲ್ಲಿ ಜನಪ್ರತಿನಿಧಿಗಳಿಗೆ ಮನವಿ ಸಲ್ಲಿಸಲಾಗಿತ್ತು. ಆದರೆ ಶಾಶ್ವತ ಪರಿಹಾರ ದೊರೆತಿರಲಿಲ್ಲ ಎಂದು ತಿಳಿಸಿದ್ದಾರೆ. ಜಿಲ್ಲಾ ಮಟ್ಟದಲ್ಲಿ ನಡೆದ ಅಂಗಡಿಮುಂಗಟ್ಟು ತೆರವು ಕಾರ್ಯಾಚರಣೆ ವೇಳೆ ತಮ್ಮ ವ್ಯಾಪಾರ ಸ್ಥಳಗಳೂ ತೆರವುಗೊಂಡಿದ್ದವು. ಈ ಹಿನ್ನೆಲೆಯಲ್ಲಿ ಶಾಸಕ ಸಿಮೆಂಟ್ ಮಂಜು ರವರ ಮಧ್ಯಸ್ಥಿಕೆಯಿಂದ ಪುರಸಭೆ ವತಿಯಿಂದ ತಾತ್ಕಾಲಿಕ ವ್ಯವಸ್ಥೆ ಕಲ್ಪಿಸಲಾಗಿತ್ತು ಎಂದು ವ್ಯಾಪಾರಿಗಳು ತಿಳಿಸಿದ್ದಾರೆ.

ಅನಂತರ ಸಂಬಂಧಪಟ್ಟ ಅಧಿಕಾರಿಗಳು ಆಹಾರ ಮಳಿಗೆ ನಡೆಸಲು ಎಸ್‌ಬಿಐ ಬ್ಯಾಂಕ್ ಮುಂಭಾಗದಲ್ಲಿ ಸೂಕ್ತ ಸ್ಥಳವನ್ನು ನಿಗದಿಪಡಿಸಿದ್ದರು. ಆದರೆ ಕೆಲವು ವ್ಯಕ್ತಿಗಳಿಂದ



ಆ ಸ್ಥಳದಲ್ಲಿ ವ್ಯಾಪಾರ ನಡೆಸಲು ತಕರಾರು ಮತ್ತು ಅಡಚಣೆಗಳು ಎದುರಾಗುತ್ತಿವೆ ಎಂದು ಆರೋಪಿಸಿದ್ದಾರೆ.

ಹಲವು ವರ್ಷಗಳಿಂದ ಇದೇ ವೃತ್ತಿಯನ್ನು ಅವಲಂಬಿಸಿ ಕುಟುಂಬ ನಿರ್ವಹಣೆ ಮಾಡುತ್ತಿರುವ ಹಿನ್ನೆಲೆಯಲ್ಲಿ, ಜೀವನೋಪಾಯಕ್ಕೆ ಧಕ್ಕೆಯಾಗದಂತೆ ಆಡಳಿತ ತಕ್ಷಣ ಮಧ್ಯಪ್ರವೇಶಿಸಿ ಈಗಾಗಲೇ ನಿಗದಿಪಡಿಸಿರುವ ಸ್ಥಳದಲ್ಲಿ ವ್ಯಾಪಾರ ನಡೆಸಲು ಅವಕಾಶ ಕಲ್ಪಿಸಿ, ಶಾಶ್ವತ ಪರಿಹಾರ ಒದಗಿಸಬೇಕೆಂದು ಬೀದಿಬದಿ ವ್ಯಾಪಾರಿಗಳು ಒತ್ತಾಯಿಸಿದ್ದಾರೆ.

ಬೀದಿಬದಿ ವ್ಯಾಪಾರಿಗಳ ಹಿತಾಸಕ್ತಿ ಕಾಪಾಡಿ, ಜೀವನೋಪಾಯಕ್ಕೆ ಅಡ್ಡಿಯಾಗದಂತೆ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

## ವಿದ್ಯಾರ್ಥಿ ಆರೋಗ್ಯ ವಿಚಾರಿಸಿದ ಶಾಸಕ ಸಿಮೆಂಟ್ ಮಂಜು



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ರಸ್ತೆ ಅಪಘಾತದಲ್ಲಿ ಗಾಯಗೊಂಡು ಹಾಸನದ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಪಟ್ಟಣದ ಬಾಳೆಗದ್ದೆ ನಿವಾಸಿ ಹೇಮಂತ್ ಅವರ ಪುತ್ರ ಹಾಗೂ 10ನೇ ತರಗತಿ ವಿದ್ಯಾರ್ಥಿ ಭವಿಷ್ ಅವರನ್ನು ಶಾಸಕ ಸಿಮೆಂಟ್ ಮಂಜು ಗುರುವಾರ ಭೇಟಿ ನೀಡಿ ಆರೋಗ್ಯ ವಿಚಾರಿಸಿದರು.

ವೈದ್ಯರಿಂದ ಚಿಕಿತ್ಸೆ ಕುರಿತು ಮಾಹಿತಿ ಪಡೆದು, ವಿದ್ಯಾರ್ಥಿಗೆ ಅಗತ್ಯ ವೈದ್ಯಕೀಯ ಸೌಲಭ್ಯಗಳನ್ನು ಸಮರ್ಪಕವಾಗಿ ಒದಗಿಸುವಂತೆ ಸೂಚಿಸಿದರು. ಬಳಿಕ ಕುಟುಂಬ ಸದಸ್ಯರಿಗೆ ಧೈರ್ಯ ತುಂಬಿ, ಭವಿಷ್ ಶೀಘ್ರ ಗುಣಮುಖರಾಗಿ ಮತ್ತೆ ವಿದ್ಯಾಭ್ಯಾಸಕ್ಕೆ ಮರಳಲಿ ಎಂದು ಹಾರೈಸಿದರು.

ಘಟನೆ ಹಿನ್ನೆಲೆ ಬುಧವಾರ ರಾತ್ರಿ ಬಾಳೆಗದ್ದೆ ಸಮೀಪ ರಸ್ತೆ ದಾಟುತ್ತಿದ್ದ ವೇಳೆ ವಿದ್ಯಾರ್ಥಿಯ ಅಜ್ಜ ಸಿದ್ದರಾಜು ಅವರು ಬೈಕ್ ಡಿಕ್ಕಿಯಾಗಿ ಗಾಯಗೊಂಡಿದ್ದರು. ಅದೇ ಮಾರ್ಗವಾಗಿ ತೆರಳುತ್ತಿದ್ದ ಶಾಸಕ ಸಿಮೆಂಟ್ ಮಂಜು ಅವರು ಗಾಯಾಳುವನ್ನು ತಮ್ಮ ಕಾರಿನಲ್ಲೇ ಆಸ್ಪತ್ರೆಗೆ ದಾಖಲಿಸಿ ಪ್ರಥಮ ಚಿಕಿತ್ಸೆ ಒದಗಿಸಿ ಮಾನವೀಯತೆ ಮೆರೆದಿದ್ದರು.

ನಂತರ ಹೆಚ್ಚಿನ ಚಿಕಿತ್ಸೆಗೆ ಸಿದ್ದರಾಜು ಅವರನ್ನು ಅಂಬುಲೆನ್ಸ್ ಮೂಲಕ ಹಾಸನಕ್ಕೆ ಕರೆದೊಯ್ಯುವ ವೇಳೆ, ಅಜ್ಜನನ್ನು ನೋಡಲು ರಸ್ತೆ ದಾಟುತ್ತಿದ್ದ ಭವಿಷ್‌ಗೆ ಮತ್ತೊಂದು ಕಾರು ಡಿಕ್ಕಿ ಹೊಡೆದ ಪರಿಣಾಮ ಆತ ಗಂಭೀರವಾಗಿ ಗಾಯಗೊಂಡಿದ್ದಾನೆ. ಈ ವೇಳೆ ಶಾಸಕರು, ವಿದ್ಯಾರ್ಥಿ ಸಂಪೂರ್ಣ ಗುಣಮುಖರಾಗಿ ಶೀಘ್ರವೇ ಸಹಜ ಜೀವನಕ್ಕೆ ಮರಳಲೆಂದು ಹಾರೈಸಿದರು.

## ಹಾಸನದಲ್ಲಿ ನಾಳೆ ನಾಡಪ್ರಭು ಕೆಂಪೇಗೌಡರ ಜಯಂತಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ನಾಡಪ್ರಭು ಕೆಂಪೇಗೌಡರ ಜಯಂತಿ ನಗರದ ಹಾಸನಾಂಬ ಕಲಾಕ್ಷೇತ್ರದಲ್ಲಿ ಜೂ. 27ರ ಶನಿವಾರ ನೆರವೇರಲಿದೆ ಎಂದು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ.ಎಚ್.ಎಲ್. ಮಲ್ಲೇಶಗೌಡ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಗುರುವಾರ ಮಾತನಾಡಿದ ಅವರು, ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಜಿಲ್ಲಾ ಒಕ್ಕಲಿಗರ ಸಂಘದಿಂದ ಹಮ್ಮಿಕೊಳ್ಳಲಾಗಿದೆ. ಆದಿಚುಂಚನಗಿರಿ ಹಾಸನ-ಕೊಡಗು ಶಾಖಾ ಮಠದ ಶ್ರೀ ಶಂಭುನಾಥ ಸ್ವಾಮೀಜಿ ಸಮಾರಂಭ ಉದ್ಘಾಟಿಸಲಿದ್ದಾರೆ. ಶಾಸಕ ಹೆಚ್.ಪಿ.ಸ್ವರೂಪ್ ಅಧ್ಯಕ್ಷತೆ ವಹಿಸಲಿದ್ದಾರೆ. ಮೈಸೂರು ವಿಶ್ವವಿದ್ಯಾಲಯದ ಇತಿಹಾಸ ಮತ್ತು




ಪುರಾತತ್ವ ಅಧ್ಯಯನ ವಿಭಾಗದ ನಿವೃತ್ತ ಪ್ರಾಧ್ಯಾಪಕ ಡಾ.ಎನ್.ಎಸ್. ರಂಗರಾಜು ಅವರು ಉಪನ್ಯಾಸ ನೀಡಲಿದ್ದಾರೆ ಎಂದರು.

ಜಯಂತಿ ಅಂಗವಾಗಿ ಶ್ರೀ ಶಂಭುನಾಥ ಸ್ವಾಮೀಜಿ ಅವರ ನೇತೃತ್ವದಲ್ಲಿ ಪೂರ್ವಭಾವಿ ಸಭೆ ನಡೆಸಲಾಗಿದೆ. ಅದ್ದೂರಿ ಮತ್ತು ಅರ್ಥಪೂರ್ಣ ಕಾರ್ಯಕ್ರಮಕ್ಕೆ ಎಲ್ಲಾ ಸಿದ್ಧತೆ ಮಾಡಿಕೊಳ್ಳಲಾಗಿದೆ. ಕೆಂಪೇಗೌಡರು ಕಟ್ಟಿದ ಬೆಂಗಳೂರು ವಿಶ್ವ ವಿಖ್ಯಾತಿಯಾಗಿದೆ. ಎಲ್ಲಾ ವರ್ಗದ ಜನರು ಅಲ್ಲಿ ನೆಲೆಸಿರುವುದು ನಮಗೆ ಅಭಿಮಾನದ ವಿಷಯ ಎಂದರು.

ನಗರದಲ್ಲಿ ಕೆಂಪೇಗೌಡರ ಪ್ರತಿಮೆ ನಿರ್ಮಾಣ ಮಾಡಲು ಶಂಭುನಾಥ ಸ್ವಾಮೀಜಿ, ಸ್ಥಳೀಯ ಶಾಸಕರು, ಒಕ್ಕಲಿಗರ ಸಂಘದ ಜಿಲ್ಲಾಧ್ಯಕ್ಷ ಜಿ.ಎಲ್.ಮುದ್ದೇಗೌಡ ಅವರ ಸಮ್ಮುಖದಲ್ಲಿ ಸಮಿತಿ ರಚಿಸಲಾಗುವುದು. ಸಮಿತಿ ಸಲಹೆಯಂತೆ ಜಾಗ ಗುರುತಿಸಿ ಮುಂದಿನ ಜಯಂತಿ ವೇಳೆಗೆ ಅನಾವರಣ ಮಾಡಲು ನಿರ್ಧರಿಸಲಾಗಿದೆ ಎಂದರು.

ಕೆಂಪೇಗೌಡ ಜಯಂತಿಯಂದು ಬಡ ಪ್ರತಿಭಾವಂತ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ಆರ್ಥಿಕ ನೆರವು ನೀಡಲು ನಿಧಿ ಸಂಗ್ರಹಿಸಲು ಸ್ವಾಮೀಜಿ ಸಲಹೆ ನೀಡಿದ್ದಾರೆ. ಆ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಲಾಗಿದೆ ಎಂದು ತಿಳಿಸಿದರು.

ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ಪುತ್ಥಳಿ ನಿರ್ಮಾಣ ಮಾಡುವ ಸಂಬಂಧ ಚರ್ಚೆ ನಡೆದಿದೆ. ಈ ಬಗ್ಗೆ ಮತ್ತೊಮ್ಮೆ ಸ್ವಾಮೀಜಿ ಸೇರಿ ಎಲ್ಲರ ಗಮನಕ್ಕೆ ತಂದು ಚರ್ಚಿಸುವುದಾಗಿ ಮಲ್ಲೇಶಗೌಡ ಹೇಳಿದರು.

ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕ ಎಸ್.ಎಸ್.ರಘುಗೌಡ ಮಾತನಾಡಿದರು. ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಒಕ್ಕಲಿಗರ ಸಂಘದ ಅಧ್ಯಕ್ಷ ಜಿ.ಎಲ್.ಮುದ್ದೇಗೌಡ, ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಜೆ.ಆರ್. ಕೆಂಚೇಗೌಡ ಹಾಜರಿದ್ದರು.

## ದುಶ್ಚಟಗಳಿಂದ ದೂರವಿದ್ದರೆ ಸುಂದರ ಬದುಕು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ಮದ್ಯ ಸೇರಿ ಮಾದಕ ಪದಾರ್ಥ ಸೇವನೆಯಿಂದ ಆರೋಗ್ಯದ ಜೊತೆಗೆ ಪ್ರಾಣ ಹಾನಿಯಾಗುವ ಸಾಧ್ಯತೆ ಹೆಚ್ಚಿದೆ ಎಂದು ಹಿರೀಸಾವೆ ಪಿಎಸ್ಐ ರೂಪಾದೇವಿ ಬಿರಾದರ್ ಹೇಳಿದರು.

ತಾಲ್ಲೂಕಿನ ಹಿರೀಸಾವೆ ಗ್ರಾಮದ ಶ್ರೀಕಂಠಯ್ಯ ವೃತ್ತದಲ್ಲಿ ಹಿರೀಸಾವೆ ಪೊಲೀಸ್ ಠಾಣೆ ಹಾಗೂ ಪಿಎಂಶ್ರೀ ಶಾಸಕರ ಮಾದರಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಿಂದ ನಡೆದ ಮಾದಕ ದ್ರವ್ಯ ವ್ಯಸನ ನಿಯಂತ್ರಣ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ತಂಬಾಕು ಸೇವನೆ ಆರೋಗ್ಯಕ್ಕೆ ಹಾನಿಕಾರಕ ಎಂದರು.



ಧೂಮಪಾನದಿಂದ ಮಾರಕವಾದ ಕ್ಯಾನ್ಸರ್ ಸೇರಿ ಶ್ವಾಸಕೋಶಕ್ಕೆ ಸಂಬಂಧಪಟ್ಟಂತೆ ವಿವಿಧ ಖಾಯಿಲೆಗಳಿಗೆ ತುತ್ತಾಗಲಿದ್ದು ಮದ್ಯ ಸೇವನೆಯಿಂದ ಹಣ ಕಳೆದುಕೊಳ್ಳುವುದರ ಜೊತೆಗೆ ನಂಬಿರುವವರ ಬದುಕು ಬೀದಿಗೆ ಬರಲಿದೆ. ಅದರಿಂದ ಗೌರವಕ್ಕೂ ಧಕ್ಕೆಯಾಗಲಿದೆ ಎಂದು ತಿಳಿಸಿದರು.

ಪಾಲಕರ ನಡೆ-ನುಡಿ ಹಾಗೂ ದೈನಂದಿನ ಬದುಕು ಮಕ್ಕಳ ಭವಿಷ್ಯಕ್ಕೆ ಮಾದರಿಯಾಗಬೇಕು.

ಮನೆಯ ವಾತಾವರಣವು ಮಕ್ಕಳಲ್ಲಿ ಸಂಸ್ಕಾರ ಕಲಿಸುತ್ತದೆ. ಪಾಲಕರು ಮಕ್ಕಳ ಮುಂದೆ ಅನುಚಿತವಾಗಿ ವರ್ತಿಸಬಾರದು. ಪಾಲಕರ ಮಾತು-ಮಾರ್ಗವು ಮಕ್ಕಳಲ್ಲಿ ಮತ್ತಷ್ಟು ಸಂಸ್ಕಾರ ಹೆಚ್ಚಿಸಲಿದೆ. ಅದರಿಂದ ಉತ್ತಮ ಸಮಾಜ ನಿರ್ಮಾಣವಾಗಲಿದೆಯೆಂದು ಸಾರ್ವಜನಿಕರಲ್ಲಿ ಅರಿವು ಮೂಡಿಸಿದರು.

ಶಾಲಾ-ಕಾಲೇಜು, ದೇಗುಲ ಹಾಗೂ ಪ್ರಾರ್ಥನಾ ಮಂದಿರಗಳ ಬಳಿ ಮದ್ಯ ಮತ್ತು ತಂಬಾಕು ಉತ್ಪನ್ನಗಳ ಮಾರಾಟ ಅಕ್ಷಮ್ಯ ಅಪರಾಧವಾಗಲಿದೆ. ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನ ಹಾಗು ಮದ್ಯಪಾನ ಮಾಡುವುದು ಕಂಡುಬಂದರೆ ಅಂತಹವರ ವಿರುದ್ಧ ಕಠಿಣ ಕಾನೂನು ಕ್ರಮ ಜರುಗಿಸಲಾಗುವುದು ಎಂದು ಎಚ್ಚರಿಸಿದರು.

ಜಾಗೃತಿ ಜಾಥಾ: ಮಾದಕ ದ್ರವ್ಯ ವ್ಯಸನ ನಿಯಂತ್ರಣ ಅಭಿಯಾನದಡಿ ಪಿಎಂಶ್ರೀ ಶಾಸಕರ ಮಾದರಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಆವರಣದಿಂದ ಪ್ರಾರಂಭವಾದ ಜಾಗೃತಿ ಜಾಥಾ ಹಳೆ ಬಿಎಂ ರಸ್ತೆ ಮಾರ್ಗವಾಗಿ ಶ್ರೀಕಂಠಯ್ಯ ವೃತ್ತ ತಲುಪಿತು. ವಿದ್ಯಾರ್ಥಿಗಳು ಮದ್ಯಪಾನ ಮತ್ತು ಧೂಮಪಾನದಿಂದಾಗುವ ದುಷ್ಪರಿಣಾಮಗಳ ಕುರಿತು ಚುಟುಕು ನಾಟಕ ಪ್ರದರ್ಶಿಸಿ ಅರಿವು ಮೂಡಿಸಿದರು.

ಶಾಲೆಯ ಮುಖ್ಯಶಿಕ್ಷಕಿ ಹೆಚ್.ಬಿ.ಉಮಾ, ಸಹ ಶಿಕ್ಷಕರಾದ ಎಲ್.ಎಸ್.ಧರ್ಮೇಶ್, ಯೋಗೇಶ್, ವಿನಯ ಎಂ.ಗುನಗ, ಗೌರಮ್ಮ, ಶೋಭ, ದೇವಕಿ, ಶ್ವೇತ, ಲಕ್ಷ್ಮಿ, ರಕ್ಷಿತಾ ಹಾಗು ಪೊಲೀಸ್ ಸಿಬ್ಬಂದಿ ಇದ್ದರು.

## ಜೈಲುವಾಸಿಗಳು ಬದಲಾವಣೆಯ ಹಾದಿ ಕಂಡುಕೊಳ್ಳಬೇಕು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಕಾರಾಗೃಹ ವಾಸಿಗಳು ಗೊತ್ತೊ ಗೊತ್ತಿಲ್ಲದೆಯೇ ಕೆಲವೊಂದು ತಪ್ಪುಗಳನ್ನು ಮಾಡಿರುತ್ತೀರಿ, ತಪ್ಪನ್ನು ಅರಿತು ಉತ್ತಮ ರೀತಿಯಲ್ಲಿ ಬದಲಾವಣೆ ಮಾಡಿಕೊಂಡು ಒಳ್ಳೆಯ ಪ್ರಜೆಗಳಾಗಿ ಬಾಳುವಂತೆ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶೆ ಹೇಮಾವತಿ ತಿಳಿಸಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಮಾನಸಿಕ ಆರೋಗ್ಯ ವಿಭಾಗ, ಹಾಸನ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ಕಾರಾಗೃಹ ಇಲಾಖೆ ಹಾಗೂ ಜಿಲ್ಲಾ ಜಿಲ್ಲಾ ಪೋಲೀಸ್ ಇಲಾಖೆ ಸಹಯೋಗದಲ್ಲಿ ಜಿಲ್ಲಾ ಕಾರಾಗೃಹದಲ್ಲಿ ಆಯೋಜಿಸಿದ್ದ ಅಂತರಾಷ್ಟ್ರೀಯ ಮಾದಕ ವಸ್ತು ವ್ಯಸನ ಮತ್ತು ಅಕ್ರಮ ಕಳ್ಳಸಾಗಣೆ ವಿರೋಧಿ ದಿನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು,



ಮಾದಕ ವಸ್ತುಗಳಿಂದಾಗುವ ದುಷ್ಪರಿಣಾಮ ಗಂಭೀರವಾಗಿರುತ್ತದೆ. ಇಲ್ಲಿಂದ ಹೋದ ನಂತರ ಉತ್ತಮ ರೀತಿಯ ಜೀವನ ಶೈಲಿಯನ್ನು ರೂಢಿಸಿಕೊಳ್ಳಬೇಕು ಎಂದರು.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಜಿ.ಕೆ.ದಾಕ್ಷಾಯಿಣಿ ಮಾತನಾಡಿ, ಪೋಕ್ಸೋ ಕಾಯ್ದೆಗಳ ಕುರಿತು ಅರಿವು ಮೂಡಿಸಿದರು.

ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮಾಧಿಕಾರಿ ಡಾ. ಪಿ.ನಾಗೇಶ್ ಮಾತನಾಡಿ, ವ್ಯಸನ ಎನ್ನುವುದು ಒಂದು ಜ್ವಲಂತ ಸಮಸ್ಯೆಯಾಗಿದ್ದು ಇವುಗಳ ಸೇವನೆಯಿಂದ ಹಲವು ರೀತಿಯಾದ ತೊಂದರೆಗಳನ್ನು ಅನುಭವಿಸುತ್ತಿರುತ್ತೇವೆ. ಜನರು ಅವುಗಳ ಸೇವನೆಯಿಂದ ದೂರವಿದ್ದು ಸುಂದರ ಜೀವನವನ್ನು ನಿರ್ಮಿಸಿಕೊಳ್ಳಿ ಎಂದು ತಿಳಿಸಿದರು.

ಮನೋವೈದ್ಯ ಡಾ. ಜೆ. ಕಾರ್ತಿಕ್ ಮಾತನಾಡಿ, ಮಾದಕ ವಸ್ತುಗಳ ಬಳಕೆಯು ಮಾನಸಿಕ ಸಮಸ್ಯೆಗಳಿಗೆ ಮುಖ್ಯ ಕಾರಣವಾಗಿದ್ದು ಬಳಕೆಯಿಂದ ದೈಹಿಕವಾಗಿ ಮತ್ತು ಮಾನಸಿಕವಾಗಿ ವ್ಯಕ್ತಿಗಳು ಸಮಸ್ಯೆಯನ್ನು ಅನುಭವಿಸುತ್ತಿರುತ್ತಾರೆ. ಮಾನಸಿಕ ಸಮಸ್ಯೆಗಳು ಯಾರಿಗಾದರೂ ಬರಬಹುದು. ಈ ಸಮಸ್ಯೆಗಳು ಬಂದಂತಹ ಸಂದರ್ಭದಲ್ಲಿ ಯಾವುದೇ ಆತಂಕಕ್ಕೊಳಗಾಗದೆ ವೈದ್ಯರನ್ನು ಭೇಟಿಯಾಗಬಹುದು. ಉಚಿತ ಮಾನಸಿಕ ಆರೋಗ್ಯ ಸಹಾಯವಾಣಿ 14416ಕ್ಕೆ ಕರೆ ಮಾಡಿ ಎಂದು ತಿಳಿಸಿದರು.

ಜಿಲ್ಲಾ ಕಾರಾಗೃಹ ಅಧೀಕ್ಷಕ ಪ್ರಸನ್ನ ಮಾತನಾಡಿ, ಮಾದಕ ವಸ್ತುಗಳನ್ನು ಬಳಸಿದಾಗ ವ್ಯಕ್ತಿಗಳು ತಮಗೆ ಅರಿವಿಲ್ಲದಂತೆ ತಪ್ಪು ಮಾಡಿ ಶಿಕ್ಷೆಗೆ ಗುರಿಯಾಗುವಂತಹ ಸಾಧ್ಯತೆ ಹೆಚ್ಚಿರುತ್ತದೆ. ಅದರಿಂದ ಅವರ ಕುಟುಂಬದವರು ಅನುಭವಿಸುವ ಸಮಸ್ಯೆಗಳ ಕುರಿತು ಹೇಳಿದರು.

ಅಪರ ಪೊಲೀಸ್ ವರಿಷ್ಠಾಧಿಕಾರಿ ಶ್ರೀನಿಧಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಅನಿಲ್ ಮತ್ತಿತರರಿದ್ದರು.

## ಅನುಮಾನದಿಂದ ಮಗಳ ಎದುರೇ ಪತ್ನಿ ಕೊಂದ ಪತಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಬೇಲೂರು: ಮೊಬೈಲ್‌ನಲ್ಲಿ ಬೇರೆಯವರ ಜೊತೆ ಮಾತನಾಡುತ್ತಾಳೆಂದು ಸಂಶಯದಿಂದ ಪತ್ನಿಯ ಕೊಲೆ ಮಾಡಿರುವ ಘಟನೆ ತಾಲ್ಲೂಕಿನ ಹುಲ್ಲೇನಹಳ್ಳಿಯಲ್ಲಿ ನಡೆದಿದೆ.

ಮಾದಿಹಳ್ಳಿ ಗ್ರಾಮದ ಗೌರಮ್ಮ ಅವರ ಪುತ್ರಿ ಯಶೋಧ (23) ಮೃತರು. ಪುನೀತ್ ಕೊಲೆ ಆರೋಪಿ. ಪರಸ್ಪರ ಪ್ರೀತಿಸಿ ಏಳು ವರ್ಷಗಳ ಹಿಂದೆ ಮದುವೆಯಾಗಿದ್ದ ದಂಪತಿಗೆ ಇಬ್ಬರು ಮಕ್ಕಳಿದ್ದಾರೆ. ಆರಂಭದಲ್ಲೇ ಚೆನ್ನಾಗಿಯೇ ಇದ್ದ ಗಂಡ-ಹೆಂಡತಿ ನಡುವೆ ಕಳೆದ ಒಂದು ವರ್ಷದಿಂದ ಬಿರುಕು ಉಂಟಾಗಿತ್ತು.

ಪತ್ನಿ ಯಶೋಧ ಅವರು ಮೊಬೈಲ್‌ನಲ್ಲಿ ಬೇರೆ ಯಾರ ಜೊತೆಗಾದರೂ ಮಾತನಾಡುತ್ತಿದ್ದರೆ ಸಂಶಯದಿಂದ ನೋಡುತ್ತಿದ್ದ ಪುನೀತ್ ಗಲಾಟೆ ಮಾಡುತ್ತಿದ್ದ. ಆತ ನೀಡುತ್ತಿದ್ದ ಮಾನಸಿಕ ಕಿರುಕುಳಕ್ಕೆ ಬೇಸತ್ತಿದ್ದ ಮಹಿಳೆ ಎರಡು ತಿಂಗಳ ಹಿಂದೆ ಸೀಮೆ ಎಣ್ಣೆ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿದ್ದರು. ತಕ್ಷಣವೇ ಹಿಮ್ಸ್ ಆಸ್ಪತ್ರೆಗೆ ದಾಖಲಿಸಿದ್ದರಿಂದ



ಬದುಕುಳಿದಿದ್ದರು. ಆ ಬಳಿಕ ಎರಡೂ ಕಡೆಯ ಕುಟುಂಬ ಸದಸ್ಯರು ರಾಜಿ ಸಂಧಾನ ಮಾಡಿ ಒಟ್ಟಿಗೆ ಇರುವಂತೆ ಸೂಚಿಸಿದ್ದರು. ಯಶೋಧ ಹಾಸನದ ಹಿಮತ್ ಸಿಂಗ್ ಕಾ ಗಾರ್ಮೆಂಟ್ಸ್‌ನಲ್ಲಿ ಕೆಲಸ ಮಾಡಿಕೊಂಡಿದ್ದರು.

ಬುಧವಾರ ಸಂಜೆ 4 ಗಂಟೆಗೆ ಯಶೋಧ ಮನೆಯಲ್ಲಿದ್ದಾಗ ಬಂದಿದ್ದ ಪುನೀತ್ ಅವಾಚ್ಯ ಶಬ್ದಗಳಿಂದ ನಿಂದಿಸುತ್ತಾ ಗಲಾಟೆ ಮಾಡುತ್ತಿದ್ದ. ಪುತ್ರಿ ಪುಣ್ಯ ಮುಂದೆಯೇ ಕುರ್ಚಿ ಮೇಲೆ ಕುಳಿತಿದ್ದ ಯಶೋಧ ಕುತ್ತಿಗೆಗೆ ಹಗ್ಗದಿಂದ ಬಿಗಿದು ಕೊಲೆ ಮಾಡಿದ್ದ. ಅದನ್ನು ಕಂಡ ಬಾಲಕಿ ಜೋರಾಗಿ ಅಳುತ್ತಿದ್ದಂತೆ ಮನೆ ಬಾಗಿಲು ಹಾಕಿಕೊಂಡು ಆಕೆಯನ್ನು ಅಂಗಡಿಗೆ ಕರೆದುಕೊಂಡು ಹೋಗಿದ್ದ. ಸಂಜೆ 6ರ ವೇಳೆಗೆ ಪತ್ನಿ ಯಶೋಧ ಆತ್ಮಹತ್ಯೆ ಮಾಡಿಕೊಂಡಿದ್ದಾಳೆಂದು ಸಂಬಂಧಿಕರಿಗೆಲ್ಲ ಸುಳ್ಳು ಹೇಳಿದ್ದ. ವಿಷಯ ತಿಳಿಯುತ್ತಿದ್ದಂತೆ ಯಶೋಧ ಅವರ ಸಂಬಂಧಿಕರು ಬಂದು ನೋಡಿದಾಗ ಕುತ್ತಿಗೆ ಭಾಗದಲ್ಲಿ ಗಾಯದ ಗುರುತು ಕಂಡುಬಂದಿದೆ. ಮಗಳು ಸಹ ನಡೆದ ವಿಚಾರವನ್ನು ಹೇಳಿದ್ದಾಳೆ. ಹಳೇಬೀಡು ಠಾಣೆ ಪೊಲೀಸರು ಮರಣೋತ್ತರ ಪರೀಕ್ಷೆಗಾಗಿ ಮೃತದೇಹವನ್ನು ಹಿಮ್ಸ್‌ಗೆ ದಾಖಲಿಸಿದ್ದಾರೆ.

# ಮಕ್ಕಳ ಮನೆ ಪರಿಕಲ್ಪನೆ ತೃಪ್ತಿ ತಂದಿದೆ: ಎ.ಮಂಜು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಕಲಗೂಡು: ತಾಲೂಕಿನಲ್ಲಿ 19 ಸರ್ಕಾರಿ ಮಕ್ಕಳ ಮನೆ ಶಾಲೆಯನ್ನು ಆರಂಭಿಸಿದಂತಾಗಿದೆ. ಇದರಿಂದ ಸರ್ಕಾರಿ ಶಾಲೆಗಳಲ್ಲಿ ಮಕ್ಕಳ ಸಂಖ್ಯೆ ಹೆಚ್ಚಳ ಹಾಗೂ ಏಕ ಕಾಲದಲ್ಲಿ ಕನ್ನಡ ಮತ್ತು ಆಂಗ್ಲಮಾಧ್ಯಮ ಶಿಕ್ಷಣವನ್ನು ಗ್ರಾಮೀಣ ಭಾಗದ ಮಕ್ಕಳಿಗೆ ಕಲ್ಪಿಸುವ ವ್ಯವಸ್ಥೆ ತೃಪ್ತಿದಾಯಕವಾಗಿದೆ ಎಂದು ಶಾಸಕ ಎ.ಮಂಜು ಸಂತಸ ವ್ಯಕ್ತಪಡಿಸಿದರು.



ತಾಲೂಕಿನ ರಾಮನಾಥಪುರ ಹೋಬಳಿ ಬೋರೆಕೋಪ್ಪಲು ಗ್ರಾಮದಲ್ಲಿ ನೂತನವಾಗಿ ನಿರ್ಮಾಣಗೊಂಡಿರುವ ಅಂಗನವಾಡಿ ಕಟ್ಟಡದಲ್ಲಿಯೇ ಮಕ್ಕಳ ಮನೆ ಪೂರ್ವ ಪ್ರಾಥಮಿಕ ಶಾಲೆಯನ್ನು ಆರಂಭಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ತಾಲೂಕಿನಲ್ಲಿ ಈ ಹಿಂದೆ 18 ಮಕ್ಕಳ ಮನೆ ಶಾಲೆಯನ್ನು ಆರಂಭಿಸಲಾಗಿತ್ತು. ನೂತನ ಕೇಂದ್ರದಲ್ಲಿ ಹಾಗೂ ಮಕ್ಕಳಿಗಾಗಿ ಮಕ್ಕಳ ಮನೆ ಮಾದರಿಯ ಕಲಿಕಾ ವ್ಯವಸ್ಥೆಯನ್ನು ರೂಪಿಸಲಾಗಿದ್ದು, ಗ್ರಾಮೀಣ ಪ್ರದೇಶದ ಮಕ್ಕಳಿಗೂ ಗುಣಮಟ್ಟದ ಪೂರ್ವ ಪ್ರಾಥಮಿಕ ಶಿಕ್ಷಣ ದೊರೆಯಬೇಕು ಎಂಬ ಉದ್ದೇಶದಿಂದ ಮಕ್ಕಳ ಮನೆ ಕಾರ್ಯಕ್ರಮ ಜಾರಿಗೊಳಿಸಲಾಗಿದೆ. ಇದು ಮಕ್ಕಳ ಸಮಗ್ರ ಬೆಳವಣಿಗೆಗೆ ಸಹಕಾರಿಯಾಗಲಿದೆ ಎಂದು ತಿಳಿಸಿದರು.

ಸಿಡಿಪಿಒ ವೆಂಕಟೇಶ್ ಮಾತನಾಡಿ, ಬೋರೆಕೊಪ್ಪಲು ಗ್ರಾಮದ ಅಂಗನವಾಡಿ ಕೇಂದ್ರವನ್ನು ಮಾನ್ಯ ಶಾಸಕರು ಮಕ್ಕಳ ಮನೆ ಮಾದರಿಯಲ್ಲಿ ಅಭಿವೃದ್ಧಿಪಡಿಸಲು ದತ್ತು ತೆಗೆದುಕೊಂಡಿದ್ದು, ಅವರ ಒತ್ತಾಸೆಯುನ್ನು ಸಹಕಾರಗೊಳಿಸಲಾಗುವುದು. ಸ್ಥಳೀಯ ಪೋಷಕರು ಮಕ್ಕಳನ್ನು ದಾಖಲಿಸಿ ಹೈಟೆಕ್ ಮಾದರಿಯಲ್ಲಿನ ಶಿಕ್ಷಣವನ್ನು ಪಡೆದುಕೊಳ್ಳಲು ಮುಂದಾಗಬೇಕೆಂದು ಮನವಿ ಮಾಡಿದರು.

ಮಕ್ಕಳ ಮನೆಯ ಕಾರ್ಯಕ್ರಮ ಅನುಷ್ಠಾನಾಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿರುವ ಡಾ.ಅಶೋಕ್ ಹನ್ಯಾಳ್ ಅವರು, 19ನೇ ಮಕ್ಕಳ ಮನೆ ಶಾಲೆಗೆ ಅಗತ್ಯವಿರುವ ಎಲ್ಲಾ ಪರಿಕರಗಳನ್ನು ಸಕಾಲಿಕವಾಗಿ ಕಲ್ಪಿಸಿಕೊಟ್ಟಿದ್ದಾರೆ. ಮಕ್ಕಳ ಮನೆ ಕಾರ್ಯಕ್ರಮದ ಯಶಸ್ಸಿಗೆ ಅವರ ದೂರದೃಷ್ಟಿ ಹೊಸ ಮೈಲಿಗಲ್ಲುಗಳನ್ನು ನಿರೂಪಿಸಿದೆ. ಈ ಯೋಜನೆಯು ಗ್ರಾಮೀಣ ಮಕ್ಕಳ ಭವಿಷ್ಯ ರೂಪಿಸುವಲ್ಲಿ ಮಹತ್ವದ ಪಾತ್ರ ವಹಿಸಲಿದೆ ಎಂದರು.

ಇದೇ ವೇಳೆ ಮಕ್ಕಳಿಗೆ ಉಚಿತವಾಗಿ ಸಮವಸ್ತ್ರ, ಶಾಲಾ ಬ್ಯಾಗ್ ಹಾಗೂ ಪುಸ್ತಕಗಳನ್ನು ವಿತರಿಸಲಾಯಿತು.

ಸ್ಥಳೀಯ ಗ್ರಾಪಂ ಅಧಿಕಾರಿಗಳು, ಅಂಗನವಾಡಿ ಕಾರ್ಯಕರ್ತೆಯರು, ಜನಪ್ರತಿನಿಧಿಗಳು, ಅಧಿಕಾರಿಗಳು, ಶಿಕ್ಷಕರು, ಪೋಷಕರು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

# ಪ್ರಕೃತಿ ಒಡಲಿನಲ್ಲಿ ಮಕ್ಕಳು ಬೆಳೆಯಬೇಕು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಕಲಗೂಡು: ಪ್ರಕೃತಿಯ ಒಡನಾಟದಲ್ಲಿ ಬೆಳೆಯುವ ಮಕ್ಕಳು ಭವಿಷ್ಯದಲ್ಲಿ ಉನ್ನತ ಸಾಧನೆ ಮಾಡಲು ಸಾಧ್ಯ ಎಂದು ಸ್ವಸ್ಥ ಸಮಾಜ ನಿರ್ಮಾಣ ಸಮಿತಿ ಅಧ್ಯಕ್ಷ ಪ್ರದೀಪ್ ರಾಮಸ್ವಾಮಿ ತಿಳಿಸಿದರು.

ಪಟ್ಟಣದ ಶಾಂತಿನಿಕೇತನ ಅನುದಾನಿತ ಶಾಲೆಯಲ್ಲಿ ಏರ್ಪಡಿಸಿದ್ದ ಪರಿಸರ ದಿನಾಚರಣೆ ಕಾರ್ಯಕ್ರಮದಲ್ಲಿ ಶಾಲಾ ಆವರಣದಲ್ಲಿ ಗಿಡಗಳನ್ನು ನೆಡುವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಹಿಂದೆ ಇಡೀ ಶಾಲೆಗೆ ಒಬ್ಬರೇ ಶಿಕ್ಷಕರಿದ್ದರು. ಇಂದಿನ ಪರಿಸ್ಥಿತಿ ಬದಲಾಗಿದೆ. ನಗರ ಪ್ರದೇಶದ ಮಕ್ಕಳಿಗಿಂತ ಗ್ರಾಮೀಣ ಭಾಗದ ಹಾಗೂ ಸರ್ಕಾರಿ ಶಾಲೆಯ ಮಕ್ಕಳಿಗೆ ಪ್ರಕೃತಿಯ ಪರಿಸರ ಹತ್ತಿರವಾಗಿರುತ್ತದೆ. ಅವರ ಪೋಷಕರು ಹೊಲಗದ್ದೆಗಳಲ್ಲಿ ಕೆಲಸ ಮಾಡುವುದನ್ನು ನೋಡಿ ಬೆಳೆಯುವುದರಿಂದ ಅವರಿಗೆ ಪ್ರಾಯೋಗಿಕ ಜ್ಞಾನ ಹೆಚ್ಚಿರುತ್ತದೆ. ಇದೇ ಕಾರಣಕ್ಕೆ ದೇಶದಲ್ಲಿ ಅತಿ ಹೆಚ್ಚು ಐಎಎಸ್ ಮತ್ತು ಕೆಎಎಸ್ ಅಧಿಕಾರಿಗಳು ಸರ್ಕಾರಿ ಶಾಲೆಗಳಿಂದಲೇ ಮೂಡಿಬಂದಿದ್ದಾರೆ ಎಂದರು.



ಕಳೆದ 20 ವರ್ಷಗಳ ಹಿಂದೆ ಇದ್ದ ಶಿಕ್ಷಕ ತರಬೇತಿಯ ಕ್ರೇಜ್ ಈಗ ಇಲ್ಲದಂತಾಗಿದೆ. ಪ್ರಸ್ತುತ ಕರ್ನಾಟಕವೊಂದರಿಂದಲೇ ಪ್ರತಿವರ್ಷ ಒಂದು ಲಕ್ಷಕ್ಕೂ ಅಧಿಕ ಇಂಜಿನಿಯರ್‌ಗಳು ಹೊರಬರುತ್ತಿದ್ದಾರೆ.

ಬೆಂಗಳೂರಿನಲ್ಲೇ ನಾಲ್ಕೈದು ಲಕ್ಷ ಇಂಜಿನಿಯರಿಂಗ್ ಪದವೀಧರರಿದ್ದಾರೆ. ಚಾಟ್ ಜಿಪಿಟಿ ಮತ್ತು ಕೋಡಿಂಗ್ ತಂತ್ರಜ್ಞಾನಗಳು ಬಂದ ಮೇಲೆ ಇಂಜಿನಿಯರಿಂಗ್ ಕ್ಷೇತ್ರದಲ್ಲಿ ಉದ್ಯೋಗಾವಕಾಶಗಳು ಕ್ಷೀಣಿಸುತ್ತಿವೆ. ಆದರೆ ಕ್ರೀಡೆ, ಚಿತ್ರಕಲೆ, ಯೋಗ, ಜಿಮ್ ತರಬೇತಿ ಅಥವಾ ಕೃಷಿ ಕ್ಷೇತ್ರದಲ್ಲಿ ವಿಪುಲ ಅವಕಾಶಗಳಿವೆ. ಕೇವಲ ಡಾಕ್ಟರ್, ಇಂಜಿನಿಯರ್ ಆಗುವುದಷ್ಟೇ ಸಾಧನೆಯಲ್ಲ. ಮನುಷ್ಯ ಈ ಭೂಮಿ ಕೇವಲ ತನಗಷ್ಟೇ ಸೀಮಿತ ಎಂದು ಭಾವಿಸಿ ಪರಿಸರವನ್ನು ಹಾಳುಮಾಡುತ್ತಿದ್ದಾನೆ. ಪ್ರಾಣಿ-ಪಕ್ಷಿಗಳಿಗೂ ಈ ಭೂಮಿಯ ಮೇಲೆ ಸಮಾನ ಹಕ್ಕಿದೆ.

ಕೇವಲ ವಾಣಿಜ್ಯ ಬೆಳೆಗಳಿಗೆ ಆದ್ಯತೆ ನೀಡದೆ, ಹಣ್ಣಿನ ಗಿಡಗಳನ್ನು ನೆಡಬೇಕು. ಇದರಿಂದ ಪ್ರಾಣಿ-ಪಕ್ಷಿಗಳಿಗೆ ಆಹಾರ ಸಿಗುತ್ತದೆ ಎಂದರು.


ಸ್ವಸ್ಥ ಸಮಾಜ ನಿರ್ಮಾಣ ಸಮಿತಿಯ ನಸ್ರುಲ್ಲಾ, ಬಸವರಾಜ್, ಕಾಂತರಾಜ್, ಸಂದೀಪ್, ಮೋಹನ್, ಸತೀಶ್, ಸೋಮಣ್ಣ, ಮೊಹಮ್ಮದ್ ಫಾಯಾಜ್ ಉಪಸ್ಥಿತರಿದ್ದರು.

# ಸಕಲೇಶಪುರದಲ್ಲಿ ಫುಡ್ ಕೋರ್ಟ್‌ಗೆ ವಿರೋಧ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ಪಟ್ಟಣದ ಎಸ್‌ಬಿಐ ಬ್ಯಾಂಕ್ ಸಮೀಪ ಫುಡ್ ಕೋರ್ಟ್ ನಿರ್ಮಿಸಿದರೆ ಸಾರ್ವಜನಿಕರಿಗೆ ತೊಂದರೆಯಾಗಲಿದ್ದು ಕೂಡಲೇ ಕಾಮಗಾರಿ ಸ್ಥಗಿತಗೊಳಿಸಿ ಬೇರೆ ಕಡೆ ವ್ಯವಸ್ಥೆ ಮಾಡಿಕೊಳ್ಳಬೇಕೆಂದು ಮಾಜಿ ಶಾಸಕ ಹೆಚ್.ಎಂ.ವಿಶ್ವನಾಥ್ ಆಗ್ರಹಿಸಿದ್ದಾರೆ.

ಎಸ್‌ಬಿಐ, ಕೆನರಾ, ಹೆಚ್‌ಡಿಎಫ್‌ಸಿ, ಕರ್ನಾಟಕ ಬ್ಯಾಂಕ್ ಸೇರಿ ಹಲವು ವಾಣಿಜ್ಯ ಮಳಿಗೆಗಳು ಇರುವ ಪ್ರದೇಶದಲ್ಲಿಯೇ ಪಟ್ಟಣ ಪಂಚಾಯಿತಿ, ಸಹಾಯಕ ಆಯುಕ್ತರ ಕಚೇರಿ, ಪ್ರವಾಸಿ ಮಂದಿರ ಹಾಗು ತಾಲ್ಲೂಕು ಕಚೇರಿಗಳಿಗೆ ಸಂಪರ್ಕ ಕಲ್ಪಿಸುವ ಪ್ರಮುಖ ರಸ್ತೆ ಇದಾಗಿದೆ. ಈ ಪ್ರದೇಶವು ಸಕಲೇಶಪುರದಲ್ಲಿ ಅತ್ಯಂತ ಹೆಚ್ಚು ಜನಸಂದಣಿ ಮತ್ತು ವಾಹನ ಸಂಚಾರ ಇರುವ ಭಾಗವಾಗಿದ್ದು, ಈಗಾಗಲೇ



ವಾಹನ ನಿಲುಗಡೆಗೆ ಸಮರ್ಪಕ ಸ್ಥಳದ ಕೊರತೆ ಎದುರಾಗಿದೆ ಎಂದು ತಿಳಿಸಿದ್ದಾರೆ.

ಇಂತಹ ಜನನಿಬಿಡ ಪ್ರದೇಶದಲ್ಲಿ ವೈಜ್ಞಾನಿಕ ಯೋಜನೆ ಇಲ್ಲದೆ ಫುಡ್ ಕೋರ್ಟ್ ನಿರ್ಮಿಸುತ್ತಿರುವುದು ಸರಿಯಲ್ಲ. ಈ ಯೋಜನೆಯನ್ನು ರೂಪಿಸಿದ ಅಧಿಕಾರಿಗಳು ಅಥವಾ ಜನಪ್ರತಿನಿಧಿಗಳು ಸಾರ್ವಜನಿಕ ಸುರಕ್ಷತೆ ಮತ್ತು ಭವಿಷ್ಯದ ಸಂಚಾರ ಸಮಸ್ಯೆಗಳ ಬಗ್ಗೆ ಯೋಚಿಸಬೇಕಿತ್ತು ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

ಇಲ್ಲಿಯೇ ಫುಡ್ ಕೋರ್ಟ್ ನಿರ್ಮಿಸಬೇಕೆಂದು ಪ್ರತಿಷ್ಟೆಯಾಗಿ ಪರಿಗಣಿಸಲಾಗಿದೆ.

ಇದರಿಂದ ಮುಂದಿನ ದಿನಗಳಲ್ಲಿ ವಾಹನ ದಟ್ಟಣೆ ಹೆಚ್ಚಾಗಿ ಅಪಘಾತಗಳು ಸಂಭವಿಸುವ ಸಾಧ್ಯತೆ ಇದೆ.

ಜಿಲ್ಲಾಧಿಕಾರಿ, ಸ್ಥಳೀಯ ಅಧಿಕಾರಿಗಳು ತಕ್ಷಣವೇ ಕಾಮಗಾರಿ ತಡೆಹಿಡಿಯಬೇಕು. ಇತ್ತೀಚೆಗೆ ಜಿಲ್ಲಾಡಳಿತ ಹಾಗೂ ಸ್ಥಳೀಯ ಆಡಳಿತವು ಪಟ್ಟಣದ ಪಾದಚಾರಿ ಮಾರ್ಗಗಳ ಮೇಲಿದ್ದ ಅತಿಕ್ರಮಣ, ತಾತ್ಕಾಲಿಕ ಅಂಗಡಿಗಳು, ಸಾರ್ವಜನಿಕರಿಗೆ ತೊಂದರೆ ಉಂಟುಮಾಡುತ್ತಿದ್ದ ಅನಧಿಕೃತ ವ್ಯಾಪಾರವನ್ನು ತೆರವುಗೊಳಿಸಿ ಪಟ್ಟಣವನ್ನು ಸುಗಮಗೊಳಿಸಲು ಕ್ರಮ ಕೈಗೊಂಡಿರುವುದು ಶ್ಲಾಘನೀಯ. ಆದರೆ ಅದೇ ಪ್ರದೇಶದಲ್ಲಿ ಮತ್ತೊಂದು ಜನಸಂದಣಿ ಕೇಂದ್ರವಾಗುವ ಫುಡ್‌ಕೋರ್ಟ್ ನಿರ್ಮಾಣಕ್ಕೆ ಅವಕಾಶ ನೀಡುವುದು ಆಡಳಿತದ ಉದ್ದೇಶಕ್ಕೇ ವಿರುದ್ಧವಾಗುತ್ತದೆ ಎಂದು ಹೇಳಿದ್ದಾರೆ.

ಶುಕ್ರವಾರದಿಂದ ಭಾನುವಾರದವರೆಗೆ ಸಕಲೇಶಪುರಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಪ್ರವಾಸಿಗರು ಆಗಮಿಸುವ ಹಿನ್ನಲೆಯಲ್ಲಿ ಈ ಪ್ರದೇಶದಲ್ಲಿ ವಾಹನ ಹಾಗೂ ಜನರ ದಟ್ಟಣೆ ಮತ್ತಷ್ಟು ಹೆಚ್ಚಾಗುತ್ತದೆ.

ಹೀಗಾಗಿ ಸಾರ್ವಜನಿಕ ಹಿತದೃಷ್ಟಿಯಿಂದ ಜಿಲ್ಲಾಧಿಕಾರಿ ತಮ್ಮ ವಿಶೇಷ ಅಧಿಕಾರ ಬಳಸಿ ಈ ಯೋಜನೆಯನ್ನು ಕೂಡಲೇ ಸ್ಥಗಿತಗೊಳಿಸಿ, ಸೂಕ್ತ ಪರ್ಯಾಯ ಸ್ಥಳದಲ್ಲಿ ಫುಡ್‌ಕೋರ್ಟ್ ನಿರ್ಮಾಣದ ಬಗ್ಗೆ ಪರಿಶೀಲನೆ ನಡೆಸಬೇಕೆಂದು ಅವರು ಒತ್ತಾಯಿಸಿದ್ದಾರೆ.

# ವ್ಯಸನಗಳು ಮನುಷ್ಯನ ಬದುಕನ್ನೇ ನಾಶ ಮಾಡುತ್ತವೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಆರಂಭದಲ್ಲಿ ಸಂತೋಷ ಹಾಗೂ ವಿನೋದಕ್ಕಾಗಿ ಆರಂಭವಾಗುವ ವ್ಯಸನಗಳು ಬದುಕನ್ನೇ ನಾಶ ಮಾಡುವ ಮಟ್ಟಕ್ಕೆ ಬೆಳೆದು ನಿಲ್ಲುತ್ತದೆ. ಜೀವನದಲ್ಲಿ ಉನ್ನತ ಆದರ್ಶ, ಸಂಸ್ಕಾರಗಳನ್ನು ಮೈಗೂಡಿಸಿಕೊಳ್ಳಬೇಕು ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಜಿ.ಕೆ. ದಾಕ್ಷಾಯಿಣಿ ತಿಳಿಸಿದರು.




ನಗರದ ಟಾರ್ಗೆಟ್ ಪದವಿ ಪೂರ್ವ ಕಾಲೇಜಿನಲ್ಲಿ ನಶಾ ಮುಕ್ತ ಭಾರತ ಅಭಿಯಾನ, ಭುವನೇಶ್ವರಿ ಮದ್ಯಪಾನ ಸೇವನಿಗಳ ಸಮಗ್ರ ಪುರ್ನವಸತಿ ಕೇಂದ್ರ, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಮತ್ತು ರಾಷ್ಟ್ರೀಯ ಸೇವಾ ಯೋಜನೆ ಹಿವ್ಸ್ ಸಹಯೋಗದೊಂದಿಗೆ ಅಂತರಾಷ್ಟೀಯ ಮಾದಕ ವಸ್ತುಗಳ ವಿರೋಧಿ ದಿನಾಚರಣೆ ಉದ್ಘಾಟಿಸಿ ಮಾತನಾಡಿದರು.

ವ್ಯಸನಿಯು ಕೆಲಸಕ್ಕೆ ಹೋಗದೆ, ಹಣದ ಸಂಪಾದನೆಯುನ್ನು ಕೂಡ ಮಾಡದೇ ಸುಮ್ಮನೆ ಕುಳಿತು, ಹೆಂಡತಿಯ ಮೇಲೆ ಅವಲಂಬಿತನಾಗುವನಲ್ಲದೆ, ಹೆಂಡತಿಯ ಮೇಲೆ ದಬ್ಬಾಳಿಕೆಯನ್ನು ಮಾಡುವುದು, ಅನುಮಾನ ಪಡುತ್ತಾ, ಯಾವುದೇ ಪ್ರೀತಿ, ವಾತ್ಸಲ್ಯ ತೋರಿಸುವುದಿಲ್ಲ. ಇಂತಹವರ ಸಂಸಾರ ಕೊನೆಗೆ ವಿಚ್ಛೇಧನ ಹಂತಕ್ಕೆ ತಲುಪುತ್ತದೆ ನ್ಯಾಯಾಲಯದಲ್ಲಿ ಪ್ರತಿದಿನ ಕೂಡ ಈ ಮದ್ಯಪಾನದಿಂದ ಸೃಷ್ಟಿಯಾದ ಅನಾಹುತಗಳೇ ಹೆಚ್ಚು ಎಂದರು.

## ಮೊಹರಂ-ತ್ಯಾಗ, ಸತ್ಯ ಮತ್ತು ಮಾನವೀಯತೆಯ ಸಂಕೇತ

ಮೊಹರಂ ಇಸ್ಲಾಂ ಧರ್ಮದ ಅತ್ಯಂತ ಪವಿತ್ರ ತಿಂಗಳುಗಳಲ್ಲಿ ಒಂದಾಗಿದೆ. ಇದು ಇಸ್ಲಾಮಿಕ್ ಹೊಸ ವರ್ಷದ ಆರಂಭವನ್ನು ಸೂಚಿಸುವುದರ ಜೊತೆಗೆ ತ್ಯಾಗ,ನ್ಯಾಯ ಮತ್ತು ಮಾನವೀಯ ಮೌಲ್ಯಗಳ ಸ್ಮರಣೆಯ ಹಬ್ಬವಾಗಿದೆ. ವಿಶೇಷವಾಗಿ ಮೊಹರಂನ ಹತ್ತನೇ ದಿನವಾದ ಆಶೂರಾ ದಿನವು ಮಹತ್ವದ್ದಾಗಿದೆ.ಈ ದಿನ ಕರ್ಬಲಾ ಯುದ್ಧದಲ್ಲಿ ಇಮಾಮ್ ಹುಸೇನ್ ಅವರು ಸತ್ಯ ಮತ್ತು ನ್ಯಾಯದ ರಕ್ಷಣೆಗೆ ತಮ್ಮ ಪ್ರಾಣವನ್ನು ಅರ್ಪಿಸಿದ ಮಹಾನ್ ಘಟನೆಯನ್ನು ನೆನಪಿಸಲಾಗುತ್ತದೆ.ಇಮಾಮ್ ಹುಸೇನ್ ಅವರು ಅನ್ಯಾಯ,ದೌರ್ಜನ್ಯ ಮತ್ತು ಅಸತ್ಯದ ವಿರುದ್ಧ ಹೋರಾಡಿದರು.ತಮ್ಮ ಕುಟುಂಬದ ಸದಸ್ಯರು ಹಾಗೂ ಸಹಚರರೊಂದಿಗೆ ಅಪಾರ ಕಷ್ಟಗಳನ್ನು ಎದುರಿಸಿದರೂ ಅವರು ಸತ್ಯದ ಮಾರ್ಗವನ್ನು ಬಿಡಲಿಲ್ಲ.ಅವರ ಜೀವನ ಮತ್ತು ತ್ಯಾಗವು ಇಂದಿಗೂ ಕೋಟ್ಯಾಂತರ ಜನರಿಗೆ ಪ್ರೇರಣೆಯಾಗಿದೆ. ಮೊಹರಂ ಹಬ್ಬವು ಕೇವಲ ದುಃಖದ ದಿನವಲ್ಲ;ಅದು ಸತ್ಯದ ಗೆಲುವು,ನೈತಿಕತೆ ಮತ್ತು ಮಾನವೀಯತೆಯ ಮಹತ್ವವನ್ನು ಸಾರುವ ಸಂದರ್ಭವಾಗಿದೆ.ಈ ದಿನ ಜನರು ಪ್ರಾರ್ಥನೆ,ದಾನಧರ್ಮ ಮತ್ತು ಸಮಾಜ ಸೇವೆಯ ಮೂಲಕ ತಮ್ಮ ಭಕ್ತಿಯನ್ನು ವ್ಯಕ್ತಪಡಿಸುತ್ತಾರೆ. ಪರಸ್ಪರ ಪ್ರೀತಿ,ಸಹೋದರತ್ವ ಮತ್ತು ಶಾಂತಿಯ ಸಂದೇಶವನ್ನು ಹರಡುವ ಕಾರ್ಯಗಳಲ್ಲಿ ತೊಡಗುತ್ತಾರೆ.

ಇಂದಿನ ಸಮಾಜದಲ್ಲಿ ಮೊಹರಂನ ಸಂದೇಶವು ಅತ್ಯಂತ ಪ್ರಸ್ತುತವಾಗಿದೆ. ಅನ್ಯಾಯದ ವಿರುದ್ಧ ಧೈರ್ಯವಾಗಿ ನಿಲ್ಲುವುದು, ಸತ್ಯದ ಪರವಾಗಿ ಮಾತನಾಡುವುದು ಮತ್ತು ಎಲ್ಲರೊಂದಿಗೆ ಮಾನವೀಯತೆಯಿಂದ ವರ್ತಿಸುವುದು ಪ್ರತಿಯೊಬ್ಬರ ಕರ್ತವ್ಯವಾಗಿದೆ.ಮೊಹರಂ ನಮಗೆ ಉತ್ತಮ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಲು ಮತ್ತು ಸಮಾಜದಲ್ಲಿ ಶಾಂತಿ ಹಾಗೂ ಸೌಹಾರ್ದತೆಯನ್ನು ಬೆಳೆಸಲು ಪ್ರೇರಣೆ ನೀಡುತ್ತದೆ. ಸತ್ಯದ ಹಾದಿಯಲ್ಲಿ ನಡೆಯುವವರಿಗೆ ತ್ಯಾಗವು ಸೋಲಲ್ಲ;ಅದು ಇತಿಹಾಸದಲ್ಲಿ ಅಮರವಾದ ವಿಜಯವಾಗಿದೆ.



**ಅಂತೋಣಿ ಮುತ್ತು ವಿ**
**ಶಿಕ್ಷಕರು, 7259675543**

## ಇತಿಹಾಸದಲ್ಲಿ ಈ ದಿನ

### ಜೂನ್-26

1945: ವಿಶ್ವಸಂಸ್ಥೆಯ ಸನ್ನದು (ಯುನೈಟೆಡ್ ನೇಷನ್ಸ್ ಚಾರ್ಟರ್‌ಗೆ ಅಮೆರಿಕದ ಸ್ಯಾನ್ ಫ್ರಾನ್ಸಿಸ್ಕೊದಲ್ಲಿ 50 ರಾಷ್ಟ್ರಗಳು ಸಹಿ ಹಾಕಿದವು. ಇದರಿಂದ ವಿಶ್ವಸಂಸ್ಥೆಯ ಸ್ಥಾಪನೆಗೆ ಅಡಿಪಾಯ ಹಾಕಲಾಯಿತು.

1948: ಬರ್ಲಿನ್ ದಿಗ್ಬಂಧನ ಆರಂಭವಾಯಿತು. ಸೋವಿಯತ್ ಒಕ್ಕೂಟವು ಪಶ್ಚಿಮ ಬರ್ಲಿನ್‌ಗೆ ರಸ್ತೆ ಮತ್ತು ರೈಲು ಸಂಪರ್ಕವನ್ನು ಸ್ಥಗಿತಗೊಳಿಸಿತು.

1997: ಜೆ.ಕೆ.ರೌಲಿಂಗ್ ಬರೆದ ಟಿಹ್ಯಾರಿ ಪಾಟರ್ ಮತ್ತು ತತ್ವಜ್ಞಾನಿಯ ಕಲ್ಲುಟಿ ಕಾದಂಬರಿ ಮೊದಲ ಬಾರಿಗೆ ಪ್ರಕಟವಾಯಿತು.

**ಜನನ**

1925: ಭಾರತದ ಮಾಜಿ ಪ್ರಧಾನಮಂತ್ರಿ, ವಿಶ್ವನಾಥ ಪ್ರತಾಪ್ ಸಿಂಗ್ (ವಿ.ಪಿ. ಸಿಂಗ್)

**ನಿಧನ**

1979: ಭಾರತದ ಕೊನೆಯ ಗವರ್ನರ್ ಜನರಲ್ ಹಾಗೂ ಹಿರಿಯ ರಾಜಕಾರಣಿ ಚಕ್ರವರ್ತಿ ರಾಜಗೋಪಾಲಾಚಾರಿ (ರಾಜಾಜಿ)

# ನಾನು.....! ಮೋಹಿನಿ ಗಂಡಾ, ಮೋಹನಾ!!!-2

**ಧನಂಜಯ ಜೀವಾಳ ಬಿ.ಕೆ.**

ತಮ್ಮ ತಂಡ ರಾತ್ರಿ ಹತ್ತೂವರೆಗೆ ಬೆಂಗಳೂರು ಬಿಡುವುದೆಂದೂ, ಸಕಲೇಶಪುರಕ್ಕೆ ಬೆಳಗಿನ ನಾಲ್ಕರ ಜಾವಕ್ಕೆ ತಲುಪುವುದೆಂದೂ, ಬೆಳಗಿನ ಜಾವ ಐದೂವರೆಗೆ ರೈಲ್ವೇ ಟ್ರ್ಯಾಕಿನಲ್ಲಿ ಚಾರಣ ಪ್ರಾರಂಭಿಸುವುದೆಂದು ತಿಳಿಸಿದರು. ಶಿರಾಡಿಘಾಟಿಯ ಅಭೇಧ್ಯವಾದ ಅರಣ್ಯದ ನಡುವೆ ಇಂಜಿನಿಯರಿಂಗ್ ಅದ್ಭುತವೇ ಎನ್ನುವಂತೆ ನಿರ್ಮಾಣವಾಗಿದ್ದ ರೈಲ್ವೇ ಹಾದಿಯನ್ನು ಬ್ರಾಡ್‌ಗೇಜ್ ಪರಿವರ್ತನೆಗಾಗಿ ಹಾಗೂ ಸಂಬಂಧಿತ ದುರಸ್ತಿಗಾಗಿ ಎಂದು ಮೂರು ವರ್ಷಗಳಿಂದ ಸಂಚಾರ ಸೌಲಭ್ಯಗಳನ್ನು ನಿಲ್ಲಿಸಲಾಗಿತ್ತು. ಮೇ ಯಿಂದ ನವೆಂಬರ್‌ನವರೆಗೂ ನಿರಂತರವಾಗಿ ಸುರಿಯುವ ಮುಸಲವರ್ಷಧಾರೆ ಅಲ್ಲಿನ ವಾತಾವರಣವನ್ನು, ಅಲ್ಲಿ ರೈಲುದಾರಿಯಿತ್ತೆಂಬುದನ್ನು ಗುರುತಿಗೇ ಸಿಗಲಾರದಂತೆ ಪರಿವರ್ತಿಸಿತ್ತು. ಭೋರ್ಗರೆಯುತ್ತಾ ಧುಮ್ಮಿಕ್ಕುವ ಬೃಹತ್ ಜಲಧಾರೆಗಳು, ಅಖಂಡ ಪಶ್ಚಿಮ ಘಟ್ಟಗಳ ನಡುವಿನಲ್ಲಿರುವ ಈ ಪರ್ವತ ಶ್ರೇಣಿಯು ಎಂಥಾ ಅನ್ವೇಷಕನನ್ನೂ ಅಧೀರನನ್ನಾಗಿಸುತ್ತದೆ.

ಆ ರೈಲ್ವೇ ಹಾದಿಯೊಂದಿಲ್ಲದಿದ್ದಲ್ಲಿ ನಾನೆಲ್ಲಿದ್ದೇನೆ? ಎತ್ತ ಸರಿಯುತ್ತಿದ್ದೇನೆ? ಹಾಗೂ ಹೇಗಿದ್ದೇನೆ ಎಂಬ ಭಯಾನಕ ಆತಂಕಕ್ಕೆ ತಳ್ಳಿ ಎದೆಗುಂದಿಸುತ್ತದೆ ಆ ಆದಿ-ಅಂತ್ಯವಿಲ್ಲದ ಅರಣ್ಯ. ತಲೆಯೆತ್ತಿ ಎತ್ತ ನೋಡಿದರೂ ಅಗಾಧವಾದ ಪರ್ವತಗಳು, ಆಕಾಶಕ್ಕೆ ಆಧಾರವಾಗಿ ನಿಂತಂತೆ ಭಾಸವಾಗುವ ಹೆಮ್ಮರಗಳು, ಸಾಧ್ಯವಾದರೆ ಆ ಹೆಮ್ಮರಗಳನ್ನು ಬಂಧಿಸೋಣ ಎಂಬ ಹವಣಿಕೆಯಲ್ಲಿ ತಬ್ಬಿ ಸುತ್ತಿಕೊಂಡಿರುವ ಸುಮಾರಾಗಿ ಲಾರಿಟೈರಿನ ಗಾತ್ರದ ಹೆಬ್ಬೀಳುಗಳು. ಪಾತಾಳದ ಕಲ್ಪನೆಗೆ ಸಾದೃಶ್ಯವಾಗಬಹುದಾದ ತಳವಿಲ್ಲದ ಕಮರಿಗಳು. ಅಲ್ಲೆಲ್ಲೋ ತಳವಿರಬಹುದೆಂಬ ಆಸೆ ಹುಟ್ಟಿಸುವ ಹರಿಯುವ ನೀರಿನ ಜಳಜಳ-ಗೊಳಗೊಳ ಸದ್ದು. ಈ ವಿಸ್ಮಯಕಾರೀ ಸನ್ನಿವೇಶದಲ್ಲಿ ಎಲ್ಲೋ ಒಮ್ಮೊಮ್ಮೆ ಮಾತ್ರ ಕೇಳಿಸುವ ಹಕ್ಕಿಗಳ ಇಂಚರ-ಚೀತ್ಕಾರಗಳು, ನಮ್ಮ ಇರುವಿಕೆಯನ್ನು ಗ್ರಹಿಸಿ ಗಾಬರಿಗೊಂಡು ಸರಕ್ಕನೇ ಪೊದೆಯೊಳಗೆ ನುಸುಳುವ ಕಾಡುಮೃಗಗಳು; ಇವನ್ನು ಬಿಟ್ಟರೆ ಗಾಳಿಯೂ ಸಹ ಎಲ್ಲಿ ಸದ್ದಾಗುವುದೋ ಎಂದು ನಿಧಾನವಾಗಿ ನಿಡುಸುಯ್ಯುತ್ತದೆ. ಈ ಎಲ್ಲಾ ಚಟುವಟಿಕೆಗಳ ನಿಗೂಢ ನೀರವತೆಯ ನಡುವೆ ನಿರಾತಂಕವಾಗಿ ನಿರಂತರ ಸದ್ದು ಮಾಡುವ ಜೀವಿಗಳೆಂದರೆ ಜೀರುಂಡೆಗಳು. ದಿನದ ನಿಗದಿತ ಸಮಯದಲ್ಲಿ ಜೈವಿಕ ಗಡಿಯಾರಕ್ಕನುಗುಣವಾಗಿ ತಂಡತಂಡಗಳಲ್ಲಿ ಇಡೀ ಕಾಡೇ ನಿರಂತರವಾಗಿ ಅನುರಣಿಸುವಂತೆ ಇವು ನಗಾರಿ ಪ್ರಾರಂಭಿಸಿದರೆ ಬಡಿತ ನಿಲ್ಲಿಸಿದ ನಂತರವೂ ಕೆಲ ಸಮಯ ಕೇಳುಗರ ತಲೆ ಧಿಮ್ಮೆನ್ನುತ್ತಿರುತ್ತದೆ.

ಆ ದಿನ ಭಾನುವಾರವಾದ್ದರಿಂದ ನಿಧಾನವಾಗಿ ತಿಂಡಿ ಮಾಡಿದರಾಯ್ತೆಂದು ಟಿ. ವಿ. ನ್ಯೂಸ್ ನೋಡ್ತಾ ಇದ್ದೆ. ಅಷ್ಟರಲ್ಲೇ ಬಾಗಿಲು ತಟ್ಟಿದ ಶಬ್ದವಾಯ್ತು. ಯಾರಿರಬಹುದು ಅಂತ ಬಾಗಿಲು ತೆರೆದರೆ ಅದೇ ಮೋಹನ. ನಮ್ಮನೆಗೆ ಪೇಪರ್ ಹಾಕಲು ಬರ್ತಿದ್ದ ಜಹೀರನಿಂದ ದಾರಿಯಲ್ಲಿಯೇ ಪೇಪರ್ ಇಸ್ಕೊಂಡು



**ಗ್ರಾಮಾಯಣ**

ಹಾಗೇ ಓದ್ತಾ ತಾನೇ ತಂದಿದ್ದ. ಬಾ ಮಾರಾಯ, ಅದೇನು ಇಷ್ಟು ಬೇಗ ಬಂದ್ಯಲ್ಲ ಅಂತ ಒಳಕರೆದು, ಬಾಗಿಲು ಹಾಕಿದೆ.

ಮೋಹನನ ತಂದೆ ನನಗೆ ಬಹಳ ಆತ್ಮೀಯರಾಗಿದ್ದ ಆನಂದೂರು ಮೇಷ್ಟ್ರು, ರಿಟೈರ್ಡ್ ಟೀಚರ್ ಆಗಿದ್ದ ಅವರು ಹದಿನೈದು ದಿನಕ್ಕೊಮ್ಮೆಯಾದ್ರೂ ನನ್ನನ್ನು ಅವರ್ಮನೆಗೆ ಕರ್ಕೊಂಡುಹೋಗಿ ಹೊಟ್ಟೆ ಬಿರಿಯುವ ಹಾಗೆ ತಿನ್ನಿಸಿ ಕಳಿಸ್ತಾ ಇದ್ರು. ಮೋಹನನನ್ನು ಕುಶಾಲನಗರದಲ್ಲಿ ಹಾಸ್ಟೆಲಿನಲ್ಲಿ ಬಿಟ್ಟು ಆಟೋಮೊಬೈಲ್ ಡಿಪ್ಲೋಮೋ ಓದಿಸ್ತಾ ಇದ್ರು.

ನಿನ್ನೆ ತಾನೇ ಹಾಸ್ಟೆಲಿನಿಂದ ಹೊರಹಾಕಿಸಿಕೊಂಡು ಬಂದಿದ್ದಾನೆ. ವಾರ್ಡನ್ ಇವರ ಮನೆಗೆ ಫೋನ್ ಮಾಡಿ ಹೇಳಿದ್ದಾರೆ, ನಮ್ಮ ಕೈಯಲ್ಲಿ ನಿಮ್ಮ ಮಗನ್ನ ಇಟ್ಟುಕೊಳ್ಳೋದಕ್ಕೆ ಆಗೋಲ್ಲ. ಬಹಳ ಗಲಾಟೆ ಮಾಡ್ತಾನೆ. ನಮ್ಮ ಹಾಸ್ಟೆಲಿನ ಹುಡುಗನೊಬ್ಬನಿಗೆ ಸೊಂಟ ಮುರಿಯುವಂತೆ ಬಾರಿಸಿದ್ದಾನೆ. ಗುಂಪು ಕಟ್ಟಿಕೊಂಡು ಹೋಗಿ ಹಾಸ್ಟೆಲಿನ ಪಕ್ಕದ ಚೌಲ್ಟ್ರಿಯ ಮ್ಯಾನೇಜರ್‌ಗೆ ಕೈ ಮುರಿದಿದ್ದಾನೆ. ಸೆಕೆಂಡ್ ಷೋ ಸಿನಿಮಾ ನೋಡಲು ತರ್ಲೆಗಳನ್ನೆಲ್ಲಾ ಸೇರಿಸಿಕೊಂಡು ಹೋಗಿ ತಿರುಗಿ ಬಂದು ದಾಂಧಲೆ ಮಾಡ್ತಾನೆ. ರಾತ್ರೋರಾತ್ರಿ ಹಾಸ್ಟೆಲಿನಲ್ಲಿ ಹಿಂದಿನ ಬಾಗಿಲು ಮುರಿದು ಒಳಬಂದು ಏನೂ ತಿಳಿಯದಂತೆ ರೂಂ ಸೇರಿಕೊಳ್ತಾನೆ.

ಇದನ್ನೆಲ್ಲಾ ಮೋಹನನ ತಂದೆ ನೆನ್ನೆ ಸಂಜೆಯೇ ದಾರಿಯಲ್ಲಿ ಸಿಕ್ಕಿ, ನೀವಾದರೂ ಹೇಳಿ, ನಮಗೆ ವಯಸ್ಸಾಗಿದೆ, ನನ್ನ ಮೇಲೆ ಡಿಪೆಂಡ್ ಆಗಿದ್ದಾರೆ ಅಂತಾ ಪೊಗರು ತೋರುತ್ತಿದ್ದಾನೆ ಎಂದಿದ್ದರು.

ನಿನ್ನೆ ರಾತ್ರಿ ಹತ್ತೂವರೆಗೆ ಮನೆಗೆ ಹೋಗಿ ಬಾಗಿಲು ಬಡಿದಿದ್ದಾನೆ. ಅವರಮ್ಮ ಇವನಿಗೋಸ್ಕರ ಕಾಯ್ದೂ ಕಾಯ್ದೂ ರಾತ್ರಿಯ ಊಟ ಮಾಡಿ, ಲೈಟಾರಿಸಿ ಮಲಗಿದ್ದರಂತೆ. ಮಗನ ದನಿ ಕೇಳಿಸಿಕೊಂಡ ತಾಯಿ ಮಲಗಿದ್ದಲಿಂದಲೇ ಯಾರೂ? ಅಂದರಂತೆ. ಅಪ್ಪ ಮಲಗಿ ನಿದ್ರೆ ಮಾಡಿರಬಹುದು, ಅಮ್ಮನ ಬಳಿ ಕಾಮಿಡಿ ಮಾಡಿ ಮನೆಯೊಳಕ್ಕೆ ಸೇರಿಕೊಂಡುಬಿಡೋಣ ಎಂದುಕೊಂಡು ಈತ ಭೂತದ ಸಿನೆಮಾ ಸ್ಟೈಲಿನಲಿ ನಾನೂ!! ಹ್ಹಹಹ್ಹಹಹ್ಹಹಾ! ಮೋಹಿನಿ ಗಂಡಾ, ಮೋಹನಾ!!! ಊಹೂಹ್ಹೂಹೂಹೂ ಎಂದನಂತೆ. ಅದೆಲ್ಲಿತ್ತೋ ಸಿಟ್ಟು, ಲೈಟೂ ಹಾಕದೇ ದಿಂಬಿನ ಬದಿ ಇಟ್ಟಿದ್ದ ಟಾರ್ಚ್‌ನಿಂದಲೇ ಕಿಟಕಿಯಾಚೆಗೆ ಬೆಳಕು ಹರಿಸಿದ ಆನಂದೂರು ಮೇಷ್ಟ್ರು, ದಾಟಾಚೆ, ಮನೆಯೊಳಕ್ಕೆ ಕಾಲಿಟ್ರೆ, ಕಾಲ್ಮುರೀತೀನಿ. ಅಲ್ಲೇ ಮೋಹಿನಿ ಜೊತೇನೇ ಇರು. ಈಡಿಯಟ್! ಎಂದು ಗದರಿಸಿ ಮನೆಯೊಳಕ್ಕೆ ಸೇರಿಸಿರಲಿಲ್ಲವಂತೆ ಹಾಗಾಗಿ ನಮ್ಮನೆಗೂ ಬರಲು ಹಿಂಜರಿದು ಅವನ ಸ್ನೇಹಿತ ಸುರೇಶನ ಮನೆಯಲ್ಲಿ ಬೇಡದ ಅತಿಥಿಯಾಗಿ ಇದ್ದು, ಬೆಳಿಗ್ಗೆಯೇ ಇಲ್ಲಿಗೆ ಬಂದಿದ್ದ. ಕಡಿದರೆ ಸರಿಸುಮಾರು ಎರಡಾಳು ಆಗಬಹುದಾದಂತೆ ಇದ್ದ ಈ ದಡಿಯನಿಗೆ ಡೌಟೇನಿತ್ತೆಂದರೆ ಹೆಂಗಸರ ಸೊಂಟದಲ್ಲಿ ಸೀರೆ ಹೇಗೆ ಗಟ್ಟಿಯಾಗಿ ನಿಲ್ಲುತ್ತೆ ಎಂಬುದು. ಇಂತಹ ದುರ್ಬುದ್ಧಿಯ ಕುತೂಹಲ ಯಾಕೆ ಬಂತೋ ಕಾಣೆ. ಸರಿ, ಬಾ ಮಾರಾಯ ನಿಮ್ಮಪ್ಪ ನನಗೆಲ್ಲಾ ಹೇಳಿದ್ದಾರೆ, ತಿಂಗಳು ತಿಂಗಳಿಗೂ ಎರಡು ಸಾವಿರ್ರುಪಾಯಿ ಕಳಿಸ್ತಾರೆ. ಮುಚ್ಕೊಂಡು ಹಾಸ್ಟೇಲ್‌ನಲ್ಲಿದ್ದು, ಓದಲಿಕ್ಕೇನು ದಾಡಿ ನಿನಗೆ. ನಿನ್ನ ರೂಂಮೇಟನ್ನು ಯಾಕೆ ಹೊಡೆದೆ ಹೇಳು ಎಂದೆ. ಸರ್ ನಿಮಿಗ್ಗೊತ್ತಿಲ್ಲ, ಆ ನನ್‌ಮಗ ರಾತ್ರಿಯಿಡೀ ಗೊರಕೆ ಹೊಡೀತಾನೆ. ಅದೆಂಥಾ ಗೊರಕೆ ಗೊತ್ತಾ? ವಿಷಲ್ ಹೊಡಿತಾರಲ್ಲ, ಹಂಗೆ ಸಾರ್. ಬೇರೆ ರೂಂನವರಿಗೆ ಅವನ ಕಾಟ ತಡಿಯಲಿಕ್ಕಾಗದೆ ಅವನನ್ನು ನನ್ನ ರೂಮಿಗೆ ಹಾಕಿದ್ರು. ಒಂದು ವಾರದಿಂದ ಈ ನನ್‌ಮಗ ಗಡದ್ ನಿದ್ದೆ ಮಾಡ್ತಿದ್ರೆ, ನಾನು ಎದ್‌ಕೂತ್ಕೊಂಡು ಇವ್ನು ಹಾಕೋ ವಿಷಲ್ ಲೆಕ್ಕ ಹಾಕೋದು ನಡೀತಿತ್ತು. ಮೊನ್ನೆ ರಾತ್ರಿ ತಡಿಯಕ್ಕಾಗ್ಲಿಲ್ಲ. ಮಲಗಿದ್ದವನಿಗೆ ತಿಕದ ಮೇಲೆ ಸರ್ರಿಯಾಗಿ ಮೇಲೆ ಒದ್ದೆ ನೋಡಿ, ನನ್‌ಮಗಂದ್ ಸೊಂಟಾನೆ ಮುರ್ದೋಗಿ ಬಿಟ್ಟಿದೆ ಸಾರ್. ಅವ್ನಿಗೆ ಈಗ ಎದ್‌ಕೂರೋಕೂ ಆಗಿಲ್ವಂತೆ ಸಾರ್.

ಸರೀ ಮಾರಾಯ, ಆ ಚೌಲ್ಟ್ರಿ ಮೇನೇಜರ್‌ಗೆ ಯಾಕೆ ಹೊಡದ್ರಿ. ಅವನ ಕೈ ಮುರಿದಿದ್ದೀರಂತೆ? ಅದ್ ಬಿಡೀ ಸರ್. ಆ ವಿಷ್ಯಾ ಮಾತ್ರ ಕೇಳ್ಬೇಡಿ. ಅದನ್ನ ಹೇಳೋಕೆ ನನಗೆ ಒಂಥರಾ ಆಗುತ್ತೆ. ಹೇಳು ಮಾರಾಯ, ನನಗೂ ಗೊತ್ತಾಗ್ಲಿ, ಯಾರ್‍ಯಾರು ಯಾವ್ಯಾವ ಕಾರಣಕ್ಕೆ ಕೈ ಮುರುಸ್ಕೋತಾರೆ ಅಂತ ಅಂದೆ. ಮೋಹನ ಹಿಂಜರಿಯುತ್ತಲೇ ಶುರು ಮಾಡಿದ.

ನಮ್ಮ ಹಾಸ್ಟೇಲಿನ ಪಕ್ಕದ ಚೌಲ್ಟ್ರಿಯಲ್ಲಿ ಹೆಚ್ಚಾಗಿ ಕೂರ್ಗಿಗಳ ಮದುವೇನೇ ಆಗೋದು, ಯಾವಾಗ್ಲೂ ನಾನ್‌ವೆಜ್ ಅಡಿಗೇನೆ ಮಾಡ್ತಾರೆ ಅಂತ ನಾವ್ ಒಂದ್ಹತ್ತು ಜನ ಐಡಿಯಾ ಮಾಡ್ಕೊಂಡು, ಮದುವೆ ಊಟನ ಅಟೆಂಡ್ ಮಾಡ್ತಿದ್ವಿ ಸಾರ್. ಎಲಾ ಬಡ್ಡಿ ಮಕ್ಳಾ ಊಟಾನ ಅಟೆಂಡ್ ಬೇರೆ ಮಾಡ್ತಿದ್ರಾ!!?ಎಂದು ಮನಸ್ಸಿನಲ್ಲೇ ಅಂದ್ಕೊಂಡು ಬಾ ಇಲ್ಲಿ ಚಪಾತಿಗೆ ಹಿಟ್ಟು ಕಲಸಿದ್ದೇನೆ, ಒಂದ್ಹತ್ತು ಚಪಾತಿ ಅರೆದುಕೊಡು, ನಾನು ಬೇಯಿಸ್ತೀನಿ, ಹಾಗೇ ಹೇಳ್ತಿರು ನಿನ್ನ ಅಡ್ವೆಂಚರ್‌ನ ಅಂದೆ.

ದಿನಾ ಬಿಟ್ಟು ದಿನ ಮದುವೆ ನಡೀತಿತ್ತಲ್ಲ ನಾವೆಲ್ಲಾ ಟ್ರಿಮ್ಮಾಗಿ ಡ್ರೆಸ್ ಮಾಡ್ಕೊಂಡು ರೆಡಿಯಾಗ್ತಿದ್ವಿ. ನಮ್ಮೊಳ್ಗೊಬ್ಬ ಎಲ್ಲರಿಗಿಂತ ಮುಂಚೆಯೇ ಹೋಗಿ ಚೌಲ್ಟ್ರಿಯ ಮುಂದೆ ನಿಂತುಕೊಂಡು ನಮ್ಮವರನ್ನೆಲ್ಲಾ ನೆಂಟರನ್ನ ಇನ್ವೈಟ್ ಮಾಡುವಂತೆ ಈಗ ಬಂದ್ರಾ? ಚೆನ್ನಾಗಿದ್ದೀರಾ? ಯಾಕೆ ಲೇಟಾಯ್ತಲ್ಲ? ಬನ್ನಿ ಬನ್ನಿ ಸೀದಾ ಊಟಕ್ಕೆ ನಡೀರಿ, ಮತ್ತೆ ರಷ್ ಆಗುತ್ತೆಟಿ ಅಂತ ಕರೆದುಕೊಂಡು ಹೋಗಿ ಊಟಕ್ಕೆ ಕೂರಿಸ್ತಿದ್ದ. ಗುಂಡು-ತುಂಡನ್ನು ಸರ್‍ರೀ ಜಡಿದು ಬರ್ತಿದ್ದೆವು. ಬೇರೆ ಬೇರೆಯವರ ಮದುವೆಯಾದ್ದರಿಂದ ಯಾರಿಗೂ ಗೊತ್ತಾಗ್ತಿರಲಿಲ್ಲ. ಈ ನನ್‌ಮಗ ಆ ಚೌಲ್ಟ್ರೀ ಮೇನೇಜರ್ ಅಬ್‌ಸರ್ವ್ ಮಾಡಿಬಿಟ್ಟಿದ್ದಾನೆ. ಒಂದಿನ ಎಲ್ಲರೆದುರಿಗೇ ನಮ್ಮನ್ನೆಲ್ಲಾ ನಿಲ್ಲಿಸಿ ಕೇಳಿಬಿಟ್ಟಿದ್ದಾನೆ ನೋಡಿ. ಸರಿಯಪ್ಪಾ ಎಂದು ವಾಪಸ್ ಬಂದೆವು. ಎಲ್ಲಾ ಮೀಟಿಂಗ್ ಸೇರಿ ಅವನಿಗೆ ಬುದ್ಧಿ ಕಲಿಸಲು ಸ್ಕೆಚ್ ಹಾಕಿದ್ವಿ. ಸಾಯಂಕಾಲ ಏಳು ಗಂಟೆಗೆಂದು ನಿಗದಿಯಾಗಿದ್ದ ಪ್ರೋಗ್ರಾಂ ಅನ್ನು ನನ್ನ ಇನ್ನೊಬ್ಬ ರೂಂಮೇಟ್ ಸದಾಶಿವ ಐದು ಗಂಟೆಗೇ ಜನರೇಟರ್ ರೂಂನಲ್ಲಿ ಎಕ್ಸ್‌ಕ್ಯೂಟ್ ಮಾಡಿಬಿಟ್ಟಿದ್ದಾನೆ. ಆದರೆ ನಾನೇ ಕೈಮುರಿದದ್ದೆಂದು ಎಲ್ಲಾ ಕಡೆ ಪ್ರಚಾರ ಆಗಿದೆ. ಹೇಳಿ ಸಾರ್ ಇದರಲ್ಲಿ ನನ್ನದೇನಾದ್ರೂ ತಪ್ಪಿದೆಯಾ? ಎಂದು ತನ್ನ ಅಸಹಾಯಕತೆಯನ್ನು ತೋಡಿಕೊಂಡ ಬಡ್ಡೀಮಗ.

ಇವನೆಂಥಾ ಖದೀಮ ಅಂತ ನನಗೊತ್ತಿತ್ತು. ಹಾಸ್ಟೆಲಿನಲ್ಲಿ ಬ್ರೆಡ್‌ಸ್ಲೈಸಿಗೆ ಅಯೋಡೆಕ್ಸ್ ಅನ್ನು ಜಾಮ್‌ನಂತೆ ಹಾಕಿಕೊಂಡು ತಿಂದವನಿವನು. ಆದರೀಗ ಮನೆಯಿಂದ ಬೇರೆ ಹೊರಹಾಕಿಸಿಕೊಂಡಿದ್ದಾನೆ, ಹಾಸ್ಟೆಲಿನವರೂ ಇವನನ್ನು ರೌಡಿ ಲಿಸ್ಟಿಗೆ ಸೇರಿಸಿದ್ದಾರೆ. ಇನ್ನು ಕಾಲೇಜಿಗೆ ಸೇರಿಸಿಕೊಳ್ಳುವ ಮಾತು ದೂರವೇ ಉಳಿಯಿತು. ಇವನ ಕಾಲೇಜಿನಲ್ಲಿ ಇವನಾಡಿರುವ ಸುಂದರಕಾಂಡವನ್ನು ಇನ್ನೆಂದಾದರೂ ಪ್ರಸ್ತಾಪಿಸೋಣ.

ಈಗ ನನ್ನ ಮನೆಗೆ ಸೇರಿಕೊಂಡಿದ್ದಾನೆ, ಸ್ನೇಹಿತ ಬೇರೆ, ಈ ಸಮಯದಲ್ಲಿ ಸಹಾಯ ಮಾಡಿ ಬುದ್ಧಿ ಹೇಳದಿದ್ದರೆ ಇವನೊಬ್ಬ ಕೇಡಿಯಾಗಿ ಬೆಳೆಯುವ ಎಲ್ಲಾ ಸಾಧ್ಯತೆಗಳಿವೆ ಎಂದುಕೊಂಡು ಹೇಗಿದ್ದರೂ ನಾಡಿದ್ದಿನಿಂದ ದಸರಾ ರಜೆ ಅಲ್ವಾ, ನಡೀ ನಮ್ಮೂರಿಗೆ ಹೋಗೋಣ, ನನಗೊಂದು ಟ್ರಕ್ಕಿಂಗಿಗೆ ಹೋಗ್ಲಿಕ್ಕಿದೆ. ಬಾ ನಂಜೊತೆ, ಹದಿನೈದು ದಿನ ಬಿಟ್ಟು ಬರೋಣ, ಬಂದ ಮೇಲೆ ನಾನೂ ನಿಮ್ಮ ಕಾಲೇಜಿಗೆ ಬಂದು ಪ್ರಿನ್ಸಿಪಾಲ್ ಬಳಿ ಮಾತನಾಡಿ ಏನಾದ್ರೂ ವ್ಯವಸ್ಥೆ ಮಾಡ್ತಿನಿ ಎಂದೆ. (ಮುಂದುವರಿಯುವುದು)

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201
and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248